# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸರ್ಕಾರಿ ಪಾಲಿಟೆಕ್ನಿಕ್, ಬಂಟ್ವಾಳ-ಇಲ್ಲಿನ ಅಧಿಕಾರಿ/ಸಿಬ್ಬಂದಿಗಳ ಕರ್ತವ್ಯ ನಿರ್ಲಕ್ಷ್ಯತೆಯನ್ನು ಕುರಿತು ಶಿಸ್ತುಕ್ರಮ ಕೈಗೊಳ್ಳುವ ಬಗ್ಗೆ.

ಓದಲಾಗಿದೆ:

ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು, ರವರ ಪತ್ರಸಂಖ್ಯೆ: ಡಿಟಿಇ 04 ಡಿಇಕ್ಯೂ 01 2013/3648, ದಿನಾಂಕ: 24.01.2015 ಮತ್ತು 1834, ದಿನಾಂಕ: 07-09-2015.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರಗಳಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರು, ಸರ್ಕಾರಿ ಪಾಲಿಟೆಕ್ನಿಕ್, ಬಂಟ್ವಾಳ-ಈ ಸಂಸ್ಥೆಯ (ಪ್ರಾಂಶುಪಾಲರಾದ) ಶ್ರೀ.ಕೆ. ಸುನೀಲ್., ಮತ್ತು ಸದರಿ ಸಂಸ್ಥೆಯ ಬೋಧಕ ಸಿಬ್ಬಂದಿಗಳಾದ ಡಾ.ಹೆಚ್.ಸಿ.ಚೆನ್ನಗಿರಿಗೌಡ., ಆಯ್ಕೆಶ್ರೇಣಿ ಉಪನ್ಯಾಸಕರು (ಸಿವಿಲ್ ವಿಭಾಗ), ಕುಮಾರಿ.ತೇಜಸ್ವಿನಿ., ವಿಜ್ಞಾನ ಉಪನ್ಯಾಸಕರು ಮತ್ತು ಶ್ರೀ.ಉಮೇಶ್., ಇ & ಸಿ ಉಪನ್ಯಾಸಕರು ಇವರುಗಳು ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯತೆಯನ್ನು ತೋರಿದ್ದು, ಸದರಿಯವರುಗಳ ಈ ರೀತಿಯ ವರ್ತನೆಯಿಂದ ಸಂಸ್ಥೆಯ ಶೈಕ್ಷಣಿಕ ವಾತಾವರಣವು ಕಲುಷಿತಗೊಂಡು ವಿದ್ಯಾರ್ಥಿಗಳ ಪಾಠಪ್ರವಚನಗಳಿಗೆ ತೊಂದರೆ ಉಂಟಾಗುತ್ತಿರುವುದಾಗಿ ಸಂಸ್ಥೆಯ ವಿದ್ಯಾರ್ಥಿಗಳು ಹಾಗೂ ಪೋಷಕರಿಂದ ದೂರುಗಳು ಬಂದ ಹಿನ್ನೆಲೆಯಲ್ಲಿ ಈ ಬಗ್ಗೆ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ತನಿಖಾ ತಂಡದಿಂದ ನಿಯಮಾನುಸಾರ ಪೂರ್ವಭಾವಿ ತನಿಖೆ ನಡೆಸಿದ್ದು, ತನಿಖಾ ತಂಡದವರು ಸಲ್ಲಿಸಿರುವ ತನಿಖಾವರದಿಯಲ್ಲಿ ಸದರಿಯವರುಗಳ ಮೇಲಿನ ಆರೋಪಗಳು ಸತ್ಯವೆಂದು ಕಂಡುಬಂದಿದ್ದು, ಸದರಿಯವರುಗಳು ಅದೇ ಸಂಸ್ಥೆಯಲ್ಲಿ ಮುಂದುವರೆದಲ್ಲಿ ಸಂಸ್ಥೆಯ ಶೈಕ್ಷಣಿಕ ವಾತಾವರಣವು ಮತ್ತಷ್ಟು ಹದಗೆಡುವುದರಿಂದ ಹಾಗೂ ಸದರಿಯವರುಗಳು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1966ರ ಸಾಮಾನ್ಯ ನಿಯಮ 3(1) (i) (ii) & (iii) ಅನ್ನು ಉಲ್ಲಂಘಿಸಿರುವ ಆರೋಪಕ್ಕೆ ಒಳಗಾಗಿದ್ದು, ಕರ್ತವ್ಯದಲ್ಲಿ ಸತ್ಯ, ನಿಷ್ಠೆ ಮತ್ತು ಶ್ರದ್ಧೆಯನ್ನು ತೋರುವುದರಲ್ಲಿ ವಿಫಲರಾಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ಉದ್ಧಟತನದಿಂದ, ಅಗೌರವದಿಂದ ವರ್ತಿಸಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲಿಸಿ, ಸದರಿಯವರುಗಳನ್ನು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಿಂದ ಬೇರೆಡೆಗೆ ವರ್ಗಾಯಿಸಿ ಆದೇಶಿಸಬೇಕೆಂದು ಕೋರಿರುತ್ತಾರೆ.

ತಾಂತ್ರಿಕ ಶಿಕ್ಷಣ ನಿರ್ದೇಶಕರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 09 ಡಿಟಿಇ 2015,**
**ಬೆಂಗಳೂರು, ದಿನಾಂಕ: 14ನೇ ಡಿಸೆಂಬರ್ 2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ, ಸರ್ಕಾರಿ ಪಾಲಿಟೆಕ್ನಿಕ್, ಬಂಟ್ವಾಳ-ಈ ಸಂಸ್ಥೆಯ ಪ್ರಾಂಶುಪಾಲರಾದ ಶ್ರೀ.ಕೆ.ಸುನೀಲ್., ಮತ್ತು ಸದರಿ ಸಂಸ್ಥೆಯ ಬೋಧಕ ಸಿಬ್ಬಂದಿಗಳಾದ ಡಾ.ಹೆಚ್.ಸಿ.ಚೆನ್ನಗಿರಿಗೌಡ., ಆಯ್ಕೆಶ್ರೇಣಿ ಉಪನ್ಯಾಸಕರು (ಸಿವಿಲ್ ವಿಭಾಗ), ಕುಮಾರಿ.ತೇಜಸ್ವಿನಿ., ವಿಜ್ಞಾನ ಉಪನ್ಯಾಸಕರು ಮತ್ತು ಶ್ರೀ.ಉಮೇಶ್., ಇ & ಸಿ ಉಪನ್ಯಾಸಕರು ಇವರುಗಳು ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯತೆಯನ್ನು ತೋರಿದ್ದು, ಸದರಿಯವರುಗಳ ಈ ರೀತಿಯ ವರ್ತನೆಯಿಂದ ಸಂಸ್ಥೆಯ ಶೈಕ್ಷಣಿಕ ವಾತಾವರಣವು ಕಲುಷಿತಗೊಂಡು ವಿದ್ಯಾರ್ಥಿಗಳ ಪಾಠಪ್ರವಚನಗಳಿಗೆ ತೊಂದರೆ ಉಂಟಾಗುತ್ತಿದ್ದುದು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ತನಿಖಾ ತಂಡವು ನಡೆಸಿದ ಪೂರ್ವಭಾವಿ ತನಿಖೆಯಿಂದ ಮೇಲ್ನೋಟಕ್ಕೆ ಸತ್ಯವೆಂದು ಕಂಡುಬಂದಿರುವುದರಿಂದ ಹಾಗೂ ಸದರಿಯವರುಗಳು ಕರ್ನಾಟಕ ನಾಗರೀಕ ಸೇವಾ ನಡತೆ (ವರ್ತನೆ) ನಿಯಮಗಳು, 1966ರ ನಿಯಮ 3(1) (i) (ii) & (iii) ಅನ್ನು ಉಲ್ಲಂಘಿಸಿ ಕರ್ತವ್ಯದಲ್ಲಿ ಸತ್ಯ, ನಿಷ್ಠೆ